
# ಘನತೆಯ ಬದುಕು

**ಮಾಧ್ಯಮಗಳು ಮಕ್ಕಳ ಹಕ್ಕುಗಳ ಉಲ್ಲಂಘನೆಯ ವರದಿ ಮಾಡುವಾಗ ಅನುಸರಿಸಲೇಬೇಕಾದ ನೀತಿ ಸಂಹಿತೆ ಮತ್ತು ಮಕ್ಕಳ ಸಂರಕ್ಷಣೆಯಲ್ಲಿ ಮಾಧ್ಯಮ ವರದಿಗಾರರ ಕರ್ತವ್ಯ ಹಾಗೂ ಜವಾಬ್ದಾರಿಗಳ ಕೈಪಿಡಿ ಬಿಡುಗಡೆಯ ಪಕ್ಷಿನೋಟ.**





**ಸಂಯೋಜನೆ:**

ಮಕ್ಕಳ ರಕ್ಷಣಾ ನಿರ್ದೇಶನಾಲಯ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಬೆಂಗಳೂರು.
ಕರ್ನಾಟಕ ರಾಜ್ಯ ಸರ್ಕಾರ. ಹಾಗೂ ಆಯಾ ಜಿಲ್ಲೆಯ: ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಪೋಲೀಸ್ ಇಲಾಖೆ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಜಿಲ್ಲಾ ಮಕ್ಕಳ ರಕ್ಷಣಾ ಘಟಕ, ಜಿಲ್ಲಾ ವಾರ್ತಾ ಇಲಾಖೆ, ಪ್ರೆಸ್ ಕ್ಲಬ್, ಯುನಿಸೆಫ್ ಮಕ್ಕಳ ಸಂರಕ್ಷಣಾ ಯೋಜನೆ ಜಿಲ್ಲಾಧಿಕಾರಿಗಳವರ ಕಛೇರಿ ಕೊಪ್ಪಳ ಮತ್ತು ಯುನಿಸಫ್ ಹೈದರಾಬಾದ್.

# GANATHEYA BADUKU

**An Overview of the release of a manual on media reporter's duties and responsibilities in child protection and the code of conduct to be followed by the media when reporting on child rights violation's.**




**Organised By:**

Directorate of Child Protection and Women and Child Development Department Bengaluru.
Each Respective Districts: District Administration, Zilla Panchayat, Police Department, District Legal Service Authority, Department of Women and Child Development, District Child Protection Unit, Department of Information and Public Relations, Press Clubs, GOK-Unicef Child Protection Project, O/o District Administration Building Koppal and Unicef Hyderabad.





**Ganatheya Baduku:** An Overview of the release of a manual on media reporters' duties and responsibilities in child protection and the code of conduct to be followed by the media when reporting on child rights violation's.

**Organised By:** Directorate of Child Protection, Department of Women and Child Development Bengaluru. and

**Each Respective Districts:** District Administration, Zilla Panchayat, Police Department, District Legal Service Authority, Department of Women and Child Development, District Child Protection Unit, Press Club, GOK-Unicef Child Protection Project, O/o District Administration Building Koppal and Unicef Hyderabad.

**Guided BY:** 2021-2023 period Deputy Commissioners, District Administration and Zilla Panchayat, Chief Executive Officers, Koppal District.

**Directed BY:** Sonykutty George, Specialist Child Protection Unicef Hyderabad.

**Concept, Design, Layout and Drafting:** K Raghavendra Bhat, Regional Coordinator, GOK-Unicef Child Protection Project, O/o Deputy Commissioner Hospet Road Koppal-583231.

**Photos:** Each Respective Districts DCPU Team.

**Year:** December 2022.

**Published By:** Directorate of Child Protection, Department fo Women and Child Development Bengaluru. District Administration, Zilla Panchayat, GOK-Unicef Child Protection Project, Koppal and Unicef Hyderabad.

## Details of the Ganatheya Baduku Book release held in 7 Districts Of Karnataka

| SL. NO | Name Of the Districts | Release Date | Venue | No of Media Reporters Participated | Other Stakeholder Attended | Given to Officials and Others | Total Book Distributed |
|---|---|---|---|---|---|---|---|
| 1. | Ramanagar | 23-02-2022 | ZP Hall | 22 | 48 | 30 | 100 |
| 2. | Tumkur | 03-03-2022 | ZP Hall | 25 | 45 | 30 | 100 |
| 3. | Shimoga | 05-03-2022 | DC Meeting Hall | 28 | 46 | 26 | 100 |
| 4. | Koppal | 06-03-2022 | DC Meeting Hall | 21 | 34 | 45 | 100 |
| 5. | Bellary | 27-05-2022 | ZP Hall | 19 | 49 | 32 | 100 |
| 6. | Chikkamagaluru | 26-08-2022 | Press Club | 41 | 22 | 37 | 100 |
| 7. | Chamarajanagar | NA | ZP Hall | 22 | 33 | 45 | 100 |
| 8. | Other 23 District | NA | Distributed in different Functions and Meetings | 759 | 1080 | 1411 | 3250 |
| 9. | Event | 05-11-2022 | In Judicial Academy POCSO state level Review meeting - Distributed for all the participants | - | - | 300 | 300 |
| Total | 30 Districts | | | 937 | 1357 | 1706 | 4250 |

**In Every District Entire Program organised By the each Respective Districts:**

**District Administration, Zilla Panchayath, Police Department, Department of Women and Child Development, District Child Protection Unit, Department of Information and Public Relations and Districts Press Clubs.**

## ಮಾಧ್ಯಮ ಮತ್ತು ಮಕ್ಕಳು.
## ಮಕ್ಕಳ ಹಕ್ಕುಗಳ ಉಲ್ಲಂಘನೆಯ ಪ್ರಕರಣಗಳ
## ಸುದ್ದಿಯ ಪ್ರಸಾರ ಹಾಗೂ ಪ್ರಕಟಿಸುವ ಸಂದರ್ಭದಲ್ಲಿ ಗಮನಿಸಲೇಬೇಕಾದ ಸೂಕ್ಷ್ಮತೆ ಹಾಗೂ ಮಾಧ್ಯಮ ನೀತಿ ಸಂಹಿತೆಯ ಮುಖ್ಯಾಂಶಗಳು.

ಮಕ್ಕಳ ನ್ಯಾಯ (ಮಕ್ಕಳ ಪೋಷಣೆ ಮತ್ತು ರಕ್ಷಣೆ) ಕಾಯ್ದೆ 2015, 2021 ರ ತಿದ್ದುಪಡಿಯಂತೆ ಯಾವುದೇ 18 ವರ್ಷದೊಳಗಿನ ಮಕ್ಕಳು ಕಾನೂನಿನೊಂದಿಗೆ ಸಂಘರ್ಷಕ್ಕೊಳಗಾದ ಸಂದರ್ಭದ (ತಪ್ಪು ಮಾಡಿದೆ ಎಂಬ ಆರೋಪ ಬಂದ) ಪ್ರಕರಣಗಳಲ್ಲಿ **"ಬಾಲಾಪರಾಧಿ"** ಎಂಬ ಬಳಕೆ ಇಲ್ಲ. ಬದಲಾಗಿ **'ಕಾನೂನಿನೊಂದಿಗೆ ಸಂಘರ್ಷದಲ್ಲಿರುವ ಮಗು'** (Children In Conflict With Law - CCL) ಎಂದು ಕರೆಯಬೇಕು. ಆದ್ದರಿಂದ ಯಾವುದೇ ಮುದ್ರಣ, ದೃಶ್ಯ ಮಾಧ್ಯಮಗಳು ಹಾಗೂ ಸಾಮಾಜಿಕ ಜಾಲತಾಣಗಳಲ್ಲಿ ಮತ್ತು ಯಾರು ಕೂಡಾ ಯಾವುದೇ ಮಗುವಿಗೂ **"ಬಾಲಾಪರಾಧಿ"** ಎಂಬ **ಶಬ್ದವನ್ನು ಬಳಸುವಂತಿಲ್ಲ. ಎಲ್ಲೂ ಪ್ರಕಟಿಸುವಂತಿಲ್ಲ ಹಾಗೂ ಪ್ರಸಾರ ಮಾಡುವಂತಿಲ್ಲ.**

ಕಾನೂನಿನೊಂದಿಗೆ ಸಂಘರ್ಷಕ್ಕೊಳಗಾದ 18 ವರ್ಷದೊಳಗಿನ ಮಕ್ಕಳನ್ನು ಮಾನಸಿಕ ಬದಲಾವಣೆಗಾಗಿ, ಪೋಷಣೆ ಮತ್ತು ರಕ್ಷಣೆಗಾಗಿ ಹಾಗೂ ಪ್ರಕರಣವನ್ನು ಮಕ್ಕಳ ನ್ಯಾಯ ಮಂಡಳಿಯಲ್ಲಿ ಮಗುವಿನ ಸುಧಾರಣೆಗಾಗಿ ತನಿಖೆ/ವಿಚಾರಣೆ ನಡೆಸುತ್ತಿರುವ ಸಂದರ್ಭದಲ್ಲಿ ಮಗುವನ್ನು ದಾಖಲಿಸುವ ಕೇಂದ್ರವನ್ನು **'ವೀಕ್ಷಣಾಲಯ'** **(Observation Home - OH)** ಎಂದು ಕರೆಯಲಾಗುತ್ತಿದೆ. **'ರಿಮ್ಯಾಂಡ್ ಹೋಂ'** ಎಂಬ **ಶಬ್ದ ಬಳಕೆ ಇಲ್ಲ, ಬಳಸುವಂತಿಲ್ಲ, ಎಲ್ಲೂ ಪ್ರಕಟಿಸುವಂತಿಲ್ಲ ಹಾಗೂ ಪ್ರಸಾರ ಮಾಡುವಂತಿಲ್ಲ.**

ಮಕ್ಕಳ ನ್ಯಾಯ (ಮಕ್ಕಳ ಪೋಷಣೆ ಮತ್ತು ರಕ್ಷಣೆ) ಕಾಯ್ದೆ–2015, ಕಲಂ–74 (1) ರ ಪ್ರಕಾರ ಯಾವುದೇ 18 ವರ್ಷದೊಳಗಿನ ಮಕ್ಕಳು ಸಂಕಷ್ಟಕ್ಕೆ, ಶೋಷಣೆಗೆ ಒಳಗಾದಾಗ ಅಥವಾ **ಪೋಷಣೆ ಮತ್ತು ರಕ್ಷಣೆ ಅವಶ್ಯಕತೆ** ಇದ್ದಲ್ಲಿ ಅಂತಹ **ಮಕ್ಕಳ ಹಾಗೂ ಮಕ್ಕಳು 'ಕಾನೂನಿನೊಂದಿಗೆ ಸಂಘರ್ಷಕ್ಕೆ'** (ತಪ್ಪು ಮಾಡಿದೆ ಎಂಬ ಆರೋಪ ಬಂದಾಗ) ಒಳಗಾದಾಗ ಅಂತಹ **ಮಕ್ಕಳ ಭಾವಚಿತ್ರ, ಹೆಸರು, ವಿಳಾಸ, ಊರು, ಶಾಲೆ, ಕುಟುಂಬ ಅಥವಾ ಅವನ\ಅವಳ ಗುರುತು ಬಹಿರಂಗವಾಗುವಂತಹ** ಯಾವುದೇ ಮಾಹಿತಿ/ಸುದ್ದಿ/ಅಂಶಗಳನ್ನು ಎಲ್ಲೂ ಪ್ರಕಟಿಸುವಂತಿಲ್ಲ ಹಾಗೂ ಪ್ರಸಾರ ಮಾಡುವಂತಿಲ್ಲ. ತಪ್ಪಿದಲ್ಲಿ 06 ತಿಂಗಳ ಜೈಲು ಶಿಕ್ಷೆ ಮತ್ತು ರೂ. 2 ಲಕ್ಷದವರೆಗೆ ದಂಡ.

ಮಕ್ಕಳ ನ್ಯಾಯ (ಮಕ್ಕಳ ಪೋಷಣೆ ಮತ್ತು ರಕ್ಷಣೆ) ಕಾಯ್ದೆ–2015, ಕಲಂ–74 (2) ರ ಪ್ರಕಾರ ಮಕ್ಕಳಿಗೆ ಸಂಬಂಧಿಸಿದ ಯಾವುದೇ ಪ್ರಕರಣವು ಮುಕ್ತಾಯವಾಗಿದೆ ಎಂದು ಸೂಚಿಸಿದ ಮೇಲೆ ಯಾವುದೇ **ಪೊಲೀಸ್ ಠಾಣೆಯು ಮಕ್ಕಳ ದಾಖಲೆಗಳನ್ನು, ವಿವರಗಳನ್ನು ಮಕ್ಕಳ ನಡತೆಯ ಪ್ರಮಾಣಪತ್ರಕ್ಕಾಗಿ ಆಗಲೀ ಮತ್ತೊಂದಕ್ಕಾಗಲೀ ಯಾವುದಕ್ಕೂ ಆಗಲಿ ನೀಡುವಂತಿಲ್ಲ.**

ಲೈಂಗಿಕ ಅಪರಾಧಗಳಿಂದ ಮಕ್ಕಳ ಸಂರಕ್ಷಣಾ ಕಾಯ್ದೆ–2012 ರಲ್ಲಿ ಅತ್ಯಾಚಾರ ಎಂಬ ಶಬ್ದ ಇಲ್ಲ ಹಾಗೂ ಬಳಕೆ ಮಾಡಿಲ್ಲ, ಆದ್ದರಿಂದ 18 ವರ್ಷದೊಳಗಿನ ಯಾವುದೇ ಮಕ್ಕಳ ಮೇಲಿನ ಲೈಂಗಿಕ ಹಲ್ಲೆ **ಪ್ರಕರಣಗಳ ಸುದ್ದಿಯ ಪ್ರಸಾರ ಹಾಗೂ ಪ್ರಕಟಿಸುವ ಸಂದರ್ಭದಲ್ಲಿ ಅತ್ಯಾಚಾರ ಎಂಬ ಶಬ್ದ ಬಳಕೆ ಮಾಡದೆ,** ಲೈಂಗಿಕ ಹಲ್ಲೆ, ದೌರ್ಜನ್ಯ, ಹಿಂಸೆ, ಕಿರುಕುಳ ಅಥವಾ ಶೋಷಣೆ ಎಂದು ಬಳಕೆ ಮಾಡುವುದು ಮತ್ತು ಬಳಸುವುದು.

ಲೈಂಗಿಕ ಅಪರಾಧಗಳಿಂದ ಮಕ್ಕಳ ಸಂರಕ್ಷಣಾ ಕಾಯ್ದೆ–2012ರ ಕಲಂ–23 (1) (2) (3) (4) ರ ಪ್ರಕಾರ 18 ವರ್ಷದೊಳಗಿನ ಮಕ್ಕಳ ಮೇಲಿನ ಲೈಂಗಿಕ ಹಲ್ಲೆ, ದೌರ್ಜನ್ಯ, ಹಿಂಸೆ, ಕಿರುಕುಳ, ದುರುಪಯೋಗ ಮತ್ತು ಶೋಷಣೆಯ ಪ್ರಕರಣಗಳಲ್ಲಿ ಮಾಧ್ಯಮಗಳು **ಮಕ್ಕಳ ಭಾವಚಿತ್ರ, ಹೆಸರು, ವಿಳಾಸ, ಊರು, ಶಾಲೆ, ಕುಟುಂಬ ಅಥವಾ ಅವನ\ಅವಳ ಗುರುತು** ಬಹಿರಂಗವಾಗುವಂತಹ ಯಾವುದೇ ಮಾಹಿತಿ/ಸುದ್ದಿ/ಅಂಶಗಳನ್ನು ಎಲ್ಲೂ ಪ್ರಕಟಿಸುವಂತಿಲ್ಲ ಹಾಗೂ ಪ್ರಸಾರ ಮಾಡುವಂತಿಲ್ಲ. ತಪ್ಪಿದಲ್ಲಿ 01 ವರ್ಷಗಳ ಜೈಲು ಶಿಕ್ಷೆ ಮತ್ತು ದಂಡ.

ಲೈಂಗಿಕ ಅಪರಾಧಗಳಿಂದ ಮಕ್ಕಳ ಸಂರಕ್ಷಣಾ ಕಾಯ್ದೆ–2012ರ ಕಲಂ–15 ರ ಪ್ರಕಾರ, ಯಾರೂ ಕೂಡ 18 ವರ್ಷದೊಳಗಿನ ಮಕ್ಕಳ, ಯಾವುದೇ ರೀತಿಯ ಅಶ್ಲೀಲ ಚಿತ್ರಗಳನ್ನು, ವೀಡಿಯೋಗಳನ್ನು, ಕಾಮಪ್ರಚೋದಕ ಚಿತ್ರಗಳನ್ನು **ಯಾವುದೇ ರೂಪದಲ್ಲಿ ಸಂಗ್ರಹಿಸುವಂತಿಲ್ಲ.** ತಪ್ಪಿದಲ್ಲಿ 03 ವರ್ಷಗಳವರೆಗೆ ಜೈಲು ಶಿಕ್ಷೆ ಮತ್ತು ದಂಡ.

ಲೈಂಗಿಕ ಅಪರಾಧಗಳಿಂದ ಮಕ್ಕಳ ಸಂರಕ್ಷಣಾ ಕಾಯ್ದೆ–2012ರ **ಕಲಂ–19 (1)** ರ ಪ್ರಕಾರ, ಅಪರಾಧ ಪ್ರಕ್ರಿಯಾ ಸಂಹಿತೆ 1973ರಲ್ಲಿ ಏನೇ ಹೇಳಿದ್ದರೂ, (ಮಕ್ಕಳನ್ನೂ ಒಳಗೊಂಡು) ಯಾವುದೇ ವ್ಯಕ್ತಿಗೆ ಈ ಕಾಯಿದೆಯಲ್ಲಿ ವಿವರಿಸಿರುವಂತಹ ಅಪರಾಧಗಳು ಜರುಗಬಹುದೆಂಬ ಗುಮಾನಿ ಬಂದಾಗ ಅಥವಾ ಅಂತಹ ಅಪರಾಧ ಜರುಗಿದೆ ಎಂದು ತಿಳಿದಾಗ **ಆತ ಅಂತಹ ಮಾಹಿತಿಯನ್ನು ಈ ಮುಂದಿನವರಿಗೆ ಒದಗಿಸಬೇಕು. (a) ಮಕ್ಕಳ ವಿಶೇಷ ಪೊಲೀಸ್ ಘಟಕ; ಅಥವಾ (b) ಸ್ಥಳೀಯ ಪೊಲೀಸ್.** ತಪ್ಪಿದಲ್ಲಿ 6 ತಿಂಗಳವರೆಗೆ ಜೈಲು ಶಿಕ್ಷೆ ಮತ್ತು ದಂಡ (ಕಲಂ 21(1))

18 ವರ್ಷದೊಳಗಿನ ಮಗು/ಮಕ್ಕಳು ಕಾಣೆಯಾದ ಸಂದರ್ಭಗಳಲ್ಲಿ ಮಗುವಿನ ಪೋಷಕರನ್ನು ಪತ್ತೆ ಹಚ್ಚಲು **ಸೂಕ್ತ ಸಕ್ಷಮ ಅಧಿಕಾರಿಗಳು ನಿಯಮಾನುಸಾರ ನಿಗದಿತ ನಮೂನೆ ಮತ್ತು ಕ್ರಮದನ್ವಯ ನೀಡುವ ಪ್ರಕಟಣೆಯ** ಆಧಾರದ ಮೇಲೆ **ಮಾತ್ರ** ಮಗುವಿನ ಭಾವಚಿತ್ರವನ್ನು ಮಾಧ್ಯಮಗಳಲ್ಲಿ ಪ್ರಕಟಿಸಬಹುದು ಹಾಗೂ ಪ್ರಸಾರ ಮಾಡಬಹುದು.

## Media and Children.
## Case of Violation's of Children's Rights
## Points of Care and Media Code of Conduct to be observed and followed while broadcasting and Publishing News.

Best interest of the children's as per the main principle of the Juvenile Justice (Care and Protection of Children) act 2015 as amended in 2021, BALAPARADHI word should not be used, we need to use **Children in Conflict with Law- CCL**.

As amended in 2021 Juvenile Justice (Care and Protection of Children) act 2015 there is no Remand Home in India, it has been changed as **Observation Home.** So we need to use the word Observation Home - OH not Remand Home.

**According to Section-74 (1)** of the Juvenile Justice (Care and Protection of Children) Act-2015, any child under 18 years of age who is in 'conflict with the law' (alleged to have committed a wrong doing) and any child under the age of 18 years is distressed, exploited or in need of care and protection **such children's photograph, name, address, town, school, family or his/her identity, any such information/ news cannot be published or disseminated anywhere.** 06 months imprisonment and Rs. 2 lakh fine.

**According to Section-74 (2)** of the Juvenile Justice (Care and Protection of Children) Act-2015, **The Police shall not disclose any record of the child for the purpose of character certificate or otherwise in cases where the case has been closed or disposed of.**

The Protection of Children from Sexual Offenses Act-2012 does not contain or use the term rape, therefore, while broadcasting and **publishing news of cases of sexual assault on any child under the age of 18 years, without using the term rape, use it as sexual assault, abuse, violence, harassment or exploitation.**

**According to Section-23 (1) (2) (3) (4)** of the Protection of Children from Sexual Offenses Act-2012, in cases of sexual assault, abuse, violence, harassment and exploitation of children **below 18 years of age, the media shall not publish any child/children's photograph, name, Address, town, school, family or any information/news/facts revealing his/her identity shall not be published or broadcast anywhere.** Imprisonment for 01 years and fine in default.

**According to Section-15** of the Protection of Children from Sexual Offenses Act-2012, **no one shall store any kind of obscene pictures, videos, sexually suggestive pictures of children under 18 years of age. Imprisonment up to 03 years and fine in default.**

**According to Section-19 (1)** of the Protection of Children from Sexual Offenses Act-2012, Notwithstanding anything contained in the Code of Criminal Procedure, 1973 any person (including the child), who has apprehension that an offence under this Act is likely to be committed or has knowledge that such an offence has been committed, **he shall provide such information (a) the Special Juvenile Police Unit: or (b) the local police.** Imprisonment for a term which may extend to 6 months and fine in default (Section 21(1)).

In cases of missing child or children's below 18 years of age, the photograph of the child may be published and circulated in the media only on the basis of a notice issued by the appropriate competent authorities in accordance with law to trace the parents of the child.

## Supreme Court Judgment WRIT PETITION (CIVIL) NO. 565 OF 2012
## Major Directions to Media – 11-12-2018

### In view of the aforesaid discussion, we issue the following Directions:

1. No person can print or publish in print, electronic, social media, etc. the name of the victim or even in a remote manner disclose any facts which can lead to the victim being identified and which should make her Identity known to the public at large.
2. In cases where the victim is dead or of unsound mind the name of the victim or her identity should not be disclosed even under the authorization of the next of the kin, unless circumstances justifying the disclosure of her identity exist, which shall be decided by the competent authority, which at present is the Sessions Judge.
3. FIRs relating to offences under Sections 376, 376A, 376AB, 376B, 376C, 376D, 376DA, 376DB or 376E of IPC and offences under POCSO shall not be put in the public domain.
4. In case a victim files an appeal under Section 372 CrPC, it is not necessary for the victim to disclose his/her identity and the appeal shall be dealt with in the manner laid down by law.
5. The police officials should keep all the documents in which the name of the victim is disclosed, as far as possible, in a sealed cover and replace these documents by identical documents in which the name of the victim is removed in all records which may be scrutinised in the public domain.
6. All the authorities to which the name of the victim is disclosed by the investigating agency or the court are also duty bound to keep the name and identity of the victim secret and not disclose it in any manner except in the report which should only be sent in a sealed cover to the investigating agency or the court.
7. An application by the next of kin to authorize disclosure of identity of a dead victim or of a victim of unsound mind under Section 228A(2)(c) of IPC should be made only to the Sessions Judge concerned until the Government acts under Section 228A(2)(c) and lays down a criteria as per our directions for identifying such social welfare institutions or organisations.
8. In case of minor victims under POCSO, disclosure of their identity can only be permitted by the Special Court, if such disclosure is in the interest of the child.
9. All the States/Union Territories are requested to set up at least one 'one stop centre' in every district within one year from today.

# Ramanagara District

Released By Deputy Commissioner District Administration, Chief Executive Officer Zilla Panchayat and Participated by all District Officers, CWC President / members, DCPO and Team and Media Reporters of the Ramanagara Distrcit at ZP Meeting Hall. ( 23-02-2022)
















# Tumkur District

Released by Karnataka state Home Minister, Education Minster along with Tumkur MP, 3 MLAs. Participated by DC, CEO-ZP, SP, CWC President and members, DCPO and Team, All District Officers and Media Reporters at ZP Meeting Hall. (03-03-2022)











## ಘನತೆಯ ಬದುಕು ಕೈಪಿಡಿ ಬಿಡುಗಡೆ

ತುಮಕೂರು: ಮಕ್ಕಳ ರಕ್ಷಣಾ ನಿರ್ದೇಶನಾಲಯ ಹಾಗೂ ಯೂನಿಸೆಫ್ ಸಹಯೋಗದಲ್ಲಿ ಹೊರ ತಂದಿರುವ "ಘನತೆಯ ಬದುಕು" ಎಂಬ ಕೈಪಿಡಿಯನ್ನು ಗೃಹ ಸಚಿವ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಅರಗ ಜ್ಞಾನೇಂದ್ರ ಅವರು ಗುರುವಾರ ಕೆ.ಡಿ.ಪಿ. ಸಭೆಯಲ್ಲಿ ಬಿಡುಗಡೆ ಮಾಡಿದರು.

ಮಕ್ಕಳ ಸಂರಕ್ಷಣೆಯಲ್ಲಿ ಮಾಧ್ಯಮಗಳ ಪಾತ್ರ, ಮಕ್ಕಳ ಹಕ್ಕುಗಳನ್ನು ಕಾಪಾಡುವ, ಮಕ್ಕಳ ಘನತೆಯನ್ನು ಎತ್ತಿಹಿಡಿಯುವ, ಮಕ್ಕಳ ಪ್ರಕರಣಗಳ ಕುರಿತು ವರದಿ ಮಾಡುವಾಗ ಎಚ್ಚರಿಕೆ ವಹಿಸಬೇಕಾದ ಸಂವೇದನಾಶೀಲ ಸೂಕ್ಷ್ಮತೆಗಳ ಮಾಹಿತಿಯನ್ನು ಈ ಕೈಪಿಡಿಯಲ್ಲಿ ನೀಡಲಾಗಿದೆ.

ಪುಸ್ತಕ ಬಿಡುಗಡೆ ಕಾರ್ಯಕ್ರಮದಲ್ಲಿ ಸಂಸದ ಜಿ.ಎಸ್. ಬಸವರಾಜು, ಶಿಕ್ಷಣ ಇಲಾಖೆ ಸಚಿವ ಬಿ.ಸಿ. ನಾಗೇಶ್, ತುರುವೇಕೆರೆ ಕ್ಷೇತ್ರದ ಶಾಸಕ ಮಸಾಲ ಜಯರಾಮ್, ತುಮಕೂರು ನಗರ ಕ್ಷೇತ್ರ ಶಾಸಕ ಜಿ.ಬಿ. ಜ್ಯೋತಿಗಣೇಶ್ ಹಾಗೂ ಶಿರಾ ಶಾಸಕ ಡಾ|| ರಾಜೇಶ್ ಗೌಡ, ಜಿಲ್ಲಾಧಿಕಾರಿ ವೈ.ಎಸ್. ಪಾಟೀಲ, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಡಾ: ಕೆ.ವಿದ್ಯಾಕುಮಾರಿ, ಜಿಲ್ಲಾ ಪೋಲೀಸ್ ವರಿಷ್ಠಾಧಿಕಾರಿ ರಾಹುಲ್ ಕುಮಾರ್ ಶಹಪೂರ್ ವಾಡ್, ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿ ವಾಸಂತಿ ಉಪ್ಪಾರ್, ಜಿಲ್ಲಾ ಹಾಗೂ ತಾಲ್ಲೂಕು ಮಟ್ಟದ ಅಧಿಕಾರಿಗಳು ಹಾಜರಿದ್ದರು.

## Shimoga Distrcit

Released by Deputy Commissioner District Administration, Chief Executive Officer Zilla Panchayat and Participated by all District Officers, CWC President / members, DCPO and Team and Media Reporters of the Shimoga Distrcit at DC Meeting Hall. (05-03-2022)






# ಮಕ್ಕಳ ಹಕ್ಕು ಉಲ್ಲಂಘನೆಗೆ ಕ್ಷಮೆ ಇಲ್ಲ

### ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಕಾರ್ಯದರ್ಶಿ ಸರಸ್ವತಿ ಹೇಳಿಕೆ

ವೀರಶೈವ ಲಿಂಗಾಯತ ಸಮಾಜ ಗ್ರಾಮಾಂತರ ಘ



ಘನತೆಯ ಬದುಕು ಪುಸ್ತಕ ಬಿಡುಗಡೆ

# ಮಕ್ಕಳ ಹಕ್ಕುಗಳ ಬಗ್ಗೆ ಪ್ರತಿಯೊಬ್ಬರಲ್ಲೂ ಜಾಗೃತಿ ಅಗತ್ಯ : ಜಿಲ್ಲಾಧಿಕಾರಿ ಸೆಲ್ವಮಣಿ

### ಪ್ರಶಸ್ತಿ ಪ್ರಧಾನ

IV ಶಿವಮೊಗ್ಗ

'ಮಕ್ಕಳ ಹಕ್ಕುಗಳಿಗೆ ಚ್ಯುತಿ ತಂದು ಸಮಸ್ಯೆಗಳಿಗೆ ಸಿಲುಕುವ ಪತ್ರಕರ್ತರು'

# ಮಾಧ್ಯಮಗಳ ಜವಾಬ್ದಾರಿ ನೆನಪಿಸುವ 'ಘನತೆಯ ಬದುಕು'

ಪ್ರಜಾವಾಣಿ ವಾರ್ತೆ



ಶಿವಮೊಗ್ಗದಲ್ಲಿ ಶುಕ್ರವಾರ ಜಿಲ್ಲಾ ಮಕ್ಕಳ ಕಲ್ಯಾಣ ಸಮಿತಿ ಶುಕ್ರವಾರ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಜಿಲ್ಲಾಧಿಕಾರಿ ಆರ್. ಸೆಲ್ವಮಣಿ 'ಘನತೆಯ ಬದುಕು' ಪುಸ್ತಕ ಬಿಡುಗಡೆ ಮಾಡಿದರು.

ಶಿವಮೊಗ್ಗ: ಅವಸರದಲ್ಲಿ ಸುದ್ದಿ ನೀಡುವ ಧಾವಂತದಲ್ಲಿ ಮಾಧ್ಯಮಗಳು ಸಮಾಜದ ಕಟ್ಟುಪಾಡು, ನೀತಿ, ನಿಯಮಗಳಿಗೆ ಚ್ಯುತಿ ತರಬಾರದು ಎಂದು ಜಿಲ್ಲಾ ಕಾನೂನು ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಸರಸ್ವತಿ ಶಿವಿಮಾತು ಹೇಳಿದರು.

ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಜಿಲ್ಲಾ ಮಕ್ಕಳ ಕಲ್ಯಾಣ ಸಮಿತಿ ಶುಕ್ರವಾರ ಹಮ್ಮಿಕೊಂಡಿದ್ದ 'ಘನತೆಯ ಬದುಕು' ಮಾಧ್ಯಮ ಮತ್ತು ಮಕ್ಕಳು ಪುಸ್ತಕ ಬಿಡುಗಡೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಮಾಧ್ಯಮಗಳು ಸಮಾಜಕ್ಕೆ ಉತ್ತಮ ಸಂದೇಶ ಬಿತ್ತರಿಸುತ್ತಿವೆ. ಕೆಲವು ವೇಳೆ ನಿಯಮಗಳ ಅರಿವಿಲ್ಲದೇ ಪತ್ರಕರ್ತರು ಸಂಕಷ್ಟಕ್ಕೆ ಸಿಲುಕುತ್ತಾರೆ. ಇದರಿಂದ ಸಮಾಜಕ್ಕೆ ತಪ್ಪು ಸಂದೇಶ ತಲುಪುತ್ತದೆ. ಸಮಾಜದ ಲೋಪದೋಷ ಎತ್ತಿ ಹಿಡಿಯುವುದು ಮಾಧ್ಯಮಗಳ ಜವಾಬ್ದಾರಿ. ಆದರೆ, ಸಮಾಜದ ಕಾನೂನು ಅರಿವು ಇಲ್ಲದಿದ್ದರೆ ಕಷ್ಟಕ್ಕೆ ಸಿಲುಕಬೇಕಾಗುತ್ತದೆ. ಇಂದು ಸಾಮಾಜಿಕ ಜಾಲತಾಣಗಳು ವೇಗವಾಗಿ ಸುದ್ದಿ ಹರಡುತ್ತವೆ. ತಪ್ಪು ಎನ್ನುವುದು ಗೊತ್ತಾಗುವುದರ ಒಳಗೆ ಪರಿಸ್ಥಿತಿ ಕೈಜಾರಿ ಹೋಗಿರುತ್ತದೆ. ಅದಕ್ಕೆ ಭಾರಿ ಬೆಲೆ ತೆರಬೇಕಾಗುತ್ತದೆ ಎಂದು ಎಚ್ಚರಿಸಿದರು.

ಮಕ್ಕಳ ವಿಷಯದಲ್ಲಿ ಮಾಧ್ಯಮಗಳು ಜಾಗ್ರತೆಯಿಂದ ನಡೆದುಕೊಳ್ಳಬೇಕು. ಪ್ರಕರಣದ ಗಂಭೀರತೆ ಅರ್ಥ ಮಾಡಿಕೊಳ್ಳಬೇಕು. ಮಕ್ಕಳ ಚಿತ್ರ, ಹೆಸರು, ಸುಳಿವು ನೀಡುವುದೂ ಅಪರಾಧ ಎನ್ನುವ ಮಾಹಿತಿ ತಿಳಿದುಕೊಂಡಿರಬೇಕು. ಮಕ್ಕಳ ಹಕ್ಕುಗಳು ಮತ್ತು ಮಾಧ್ಯಮ ಕುರಿತು ಸುಪ್ರೀಂ ಕೋರ್ಟ್ ಕೆಲವು ತೀರ್ಪುಗಳಲ್ಲಿ ತನ್ನ ನಿಲುವು ಸ್ಪಷ್ಟಪಡಿಸಿದೆ ಎಂದರು.

ಪುಸ್ತಕ ಬಿಡುಗಡೆ ಮಾಡಿದ ಜಿಲ್ಲಾಧಿಕಾರಿ ಆರ್.ಸೆಲ್ವಮಣಿ, 'ಮಕ್ಕಳ ಹಕ್ಕುಗಳ ಸಂರಕ್ಷಣೆ ಕುರಿತು ಪ್ರತಿಯೊಬ್ಬರಲ್ಲೂ ಎಚ್ಚರಿಕೆ ಇರುವ ಅಗತ್ಯ. ಮಾಧ್ಯಮಗಳು ಮಕ್ಕಳ ಹಕ್ಕುಗಳ ಉಲ್ಲಂಘನೆಯಾಗದಂತೆ ಎಚ್ಚರಿಕೆ ವಹಿಸಬೇಕು. ಮಕ್ಕಳ ಹಕ್ಕುಗಳ ಕಾಯ್ದೆಗಳು ಅತ್ಯಂತ ಕಠಿಣವಾಗಿವೆ. ಇದರ ಸೂಕ್ಷ್ಮವನ್ನು ಪ್ರತಿಯೊಬ್ಬರೂ ಅರಿಯಬೇಕು' ಎಂದು ಸಲಹೆ ನೀಡಿದರು.

ಮಕ್ಕಳ ಕಲ್ಯಾಣ ಸಮಿತಿ ಅಧ್ಯಕ್ಷೆ ಜಿ.ಎಂ.ರೇಖಾ, 'ಜಿಲ್ಲೆಯಲ್ಲಿ ಮಕ್ಕಳ ಹಕ್ಕುಗಳಿಗೆ ಚ್ಯುತಿಯಾಗುವ ಯಾವುದೇ ಪ್ರಕರಣಗಳು ಕಂಡುಬಂದರೆ ಸಾರ್ವಜನಿಕರು ಮಕ್ಕಳ ರಕ್ಷಣಾ ಸಮಿತಿಗೆ ದೂರು ನೀಡಬಹುದಾಗಿದೆ. 1098 ಸಂಖ್ಯೆಗೆ ಕರೆ ಮಾಡಿ ದೂರು ದಾಖಲಿಸಬಹುದು. ಸಮಿತಿ ತಕ್ಷಣ ಕ್ರಮ ಕೈಗೊಳ್ಳಲಿದೆ' ಎಂದು ಭರವಸೆ ನೀಡಿದರು.

ಪ್ರಾಸ್ತಾವಿಕವಾಗಿ ಮಾತನಾಡಿದ ಸಮಿತಿಯ ಸದಸ್ಯೆ ಪ್ರತಿಭಾ, ಮಾಧ್ಯಮಗಳು ವರದಿ ಮಾಡುವಾಗ ಮಕ್ಕಳ ಹಕ್ಕುಗಳಿಗೆ ಚ್ಯುತಿಯಾಗದಂತೆ ಯಾವ ರೀತಿಯಲ್ಲಿ ಕಾರ್ಯನಿರ್ವಹಿಸಬೇಕು ಎಂಬ ಮಾಹಿತಿಗಳು ಈ ಕೈಪಿಡಿಯಲ್ಲಿದೆ ಎಂದರು.

ಜಿಲ್ಲಾ ಪಂಚಾಯಿತಿ ಸಿಇಒ ಎಂ.ಎಲ್.ವೈಶಾಲಿ, ಹೆಚ್ಚುವರಿ ಜಿಲ್ಲಾಧಿಕಾರಿ ನಾಗೇಂದ್ರ ಎಫ್. ಹೊನ್ನಳ್ಳಿ, ಸಮಿತಿ ಸದಸ್ಯರಾದ ಶೀಲಾ ಸುರೇಶ್, ರೇಣುಕಮ್ಮ ಉಪಸ್ಥಿತರಿದ್ದರು.

---

ಕ್ರಾಂತಿದೀಪ

KRANTHI DEEPA REGIONAL KANNADA DAILY

ಘನತೆಯ ಬದುಕು ಪುಸ್ತಕ ಬಿಡುಗಡೆ: ಜಿಲ್ಲಾಧಿಕಾರಿ ಸೆಲ್ವಮಣಿ

# ಮಕ್ಕಳ ಹಕ್ಕುಗಳ ಬಗ್ಗೆ ಜಾಗೃತಿ ಅಗತ್ಯ



**ಶಿವಮೊಗ್ಗ, ಮಾ.04:** ಮಕ್ಕಳ ಹಕ್ಕುಗಳ ಸಂರಕ್ಷಣೆ ಕುರಿತು ಪ್ರತಿಯೊಬ್ಬರಲ್ಲೂ ಎಚ್ಚರಿಕೆ ಇರುವ ಅಗತ್ಯವಿದೆ ಎಂದು ಜಿಲ್ಲಾಧಿಕಾರಿ ಆರ್.ಸೆಲ್ವಮಣಿ ಅವರು ಹೇಳಿದರು.

ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಜಿಲ್ಲಾ ಮಕ್ಕಳ ಕಲ್ಯಾಣ ಸಮಿತಿ ವತಿಯಿಂದ 'ಘನತೆಯ ಬದುಕು' ಮಾಧ್ಯಮ ಮತ್ತು ಮಕ್ಕಳು ಪುಸ್ತಕವನ್ನು ಬಿಡುಗಡೆಗೊಳಿಸಿ ಅವರು ಮಾತನಾಡಿದರು.

ಮಾಧ್ಯಮಗಳು ತರಾತುರಿಯ ಧಾವಂತದಲ್ಲಿ ಮಕ್ಕಳ ಹಕ್ಕುಗಳ ಉಲ್ಲಂಘನೆಯಾಗದಂತೆ ಎಚ್ಚರಿಕೆ ವಹಿಸಬೇಕಿದೆ. ಮಕ್ಕಳ ಹಕ್ಕುಗಳ ಕುರಿತಾದ ಕಾಯ್ದೆಗಳು ಅತ್ಯಂತ ಕಠಿಣವಾಗಿದ್ದು, ಇದರ ಸೂಕ್ಷ್ಮತೆಯನ್ನು ಪ್ರತಿಯೊಬ್ಬರೂ ಅರ್ಥ ಮಾಡಿಕೊಳ್ಳಬೇಕಾಗಿದೆ. ವರದಿ ಮಾಡುವಾಗ ಮಕ್ಕಳ ಹಕ್ಕುಗಳ ಬಗ್ಗೆ ಅತ್ಯಂತ ಸಂವೇದನಾಶೀಲತೆಯನ್ನು ಹೊಂದಿರುವುದು ಅಗತ್ಯವಾಗಿದೆ ಎಂದರು.

ಜಿಲ್ಲಾ ಕಾನೂನು ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಸರಸ್ವತಿ ಅವರು ಜೆಜೆ ಕಾಯ್ದೆ ಮತ್ತು ಪೋಕ್ಸೋ ಕಾಯ್ದೆ ಬಗ್ಗೆ ಮಾಹಿತಿ ನೀಡಿ, ಮಕ್ಕಳ ಖಾಸಗಿತನ ಮತ್ತು ಹಕ್ಕುಗಳನ್ನು ಉಲ್ಲಂಘಿಸಲು ಯಾರಿಗೂ ಸಾಧ್ಯವಿಲ್ಲ, ಕಾಯ್ದೆ ಅತ್ಯಂತ ಬಿಗಿಯಾಗಿದ್ದು, ಮಕ್ಕಳ ವಿಷಯದಲ್ಲಿ ವ್ಯವಹರಿಸುವಾಗ ಅತೀವ ಜಾಗ್ರತೆ ಅಗತ್ಯವಿದೆ. ಮಾಧ್ಯಮಗಳು ಯಾವುದೇ ಕಾರಣಕ್ಕೂ ಮಕ್ಕಳ ಹಕ್ಕುಗಳಿಗೆ ಚ್ಯುತಿಯಾಗದಂತೆ ಎಚ್ಚರಿಕೆ ವಹಿಸಬೇಕು. ಮಕ್ಕಳ ಹಕ್ಕುಗಳು ಮತ್ತು ಮಾಧ್ಯಮ ಕುರಿತಾಗಿ ಸುಪ್ರೀಂಕೋರ್ಟ್ ಸಹ ಕೆಲವು ತೀರ್ಪುಗಳಲ್ಲಿ ತ[illegible] ನಿಲುವನ್ನು ಸ್ಪಷ್ಟಪಡಿಸಿದ್ದು, ವಿಷಯದ ಗಂಭೀರ[illegible]ಯನ್ನು ಅರ್ಥ ಮಾಡಿಕೊಳ್ಳಬಹುದಾಗಿದೆ ಎಂದರು.

ಮಕ್ಕಳ ಕಲ್ಯಾಣ ಸಮಿತಿ ಅಧ್ಯಕ್ಷೆ ಜಿ.ಎಂ.ರೇಖಾ ಅವರು ಮಾತನಾಡಿ, ಜಿಲ್ಲೆಯಲ್ಲಿ ಮಕ್ಕಳ ಹಕ್ಕುಗಳಿಗೆ ಚ್ಯುತಿಯಾಗುವ ಯಾವುದೇ ಪ್ರಕರಣಗಳು ಕಂಡು ಬಂದಲ್ಲಿ ಸಾರ್ವಜನಿಕರು ಮಕ್ಕಳ ರಕ್ಷಣಾ ಸಮಿತಿಗೆ ದೂರು ನೀಡಬಹುದಾಗಿದೆ. 1098 ಸಂಖ್ಯೆಗೆ ಕರೆ ಮಾಡಿ ದೂರು ದಾಖಲಿಸಿದರೂ ಸಮಿತಿ ತಕ್ಷಣ ಕ್ರಮ ಕೈಗೊಳ್ಳಲಿದೆ ಎಂದರು.

ಸಮಿತಿಯ ಸದಸ್ಯೆ ಪ್ರತಿಭಾ ಅವರು ಪ್ರಾಸ್ತಾವಿಕವಾಗಿ ಮಾತನಾಡಿ, ಮಾಧ್ಯಮಗಳು ವರದಿಯನ್ನು ಮಾಡುವಾಗ ಮಕ್ಕಳ ಹಕ್ಕುಗಳಿಗೆ ಚ್ಯುತಿಯಾಗದಂತೆ ಯಾವ ರೀತಿಯಲ್ಲಿ ಕಾರ್ಯನಿರ್ವಹಿಸಬೇಕು ಇತ್ಯಾದಿ ಅಮೂಲ್ಯ ಮಾಹಿತಿಗಳು ಈ ಕೈಪಿಡಿಯಲ್ಲಿದೆ ಎಂದು ಹೇಳಿದರು.

ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಎಂ.ಎಲ್.ವೈಶಾಲಿ, ಅಪರ ಜಿಲ್ಲಾಧಿಕಾರಿ ನಾಗೇಂದ್ರ ಎಫ್.ಹೊನ್ನಳ್ಳಿ, ಸಮಿತಿ ಸದಸ್ಯರಾದ ಶೀಲಾ ಸುರೇಶ್, ರೇಣುಕಮ್ಮ ಸೇರಿದಂತೆ ಅಧಿಕಾರಿಗಳು ಉಪಸ್ಥಿತರಿದ್ದರು.

## Koppal District:

Released by Karnataka state Women and Child Development Department Minister, MLAs along with DWCD Principle Secretary, Commissioner, DWCD Commissioner. Participated by DC, CEO-ZP, SP , CWC President and members, DCPO and Team, All District Officers and Media Reporters at DC Meeting Hall. (06-03-2022)









## Bellary District:

Released By Deputy Commissioner District Administration, Chief Executive Officer Zilla Panchayat and Participated by all District Officers, CWC President / members, DCPO and Team and Media Reporters of the Bellary Distrcit at ZP Meeting Hall. (27-05-2022)















# Chikkamagaluru District

Released By Assist Deputy Commissioner District Administration, DLSA Secretary, Participated by all District Officers, CWC President / members, DCPO and Team and Media Reporters of the Chikkamagaluru Distrcit at Press Club. (26-08-2022)




















ಒಂದನೇ ಪುಟದಿಂದ...

## ಮಕ್ಕಳ ರಕ್ಷಣೆಗೆ "ಘನತೆಯ ಬದುಕು"

CM K

ಸಮಾಜದ ಅಭಿವೃದ್ಧಿ ವರದಿಗಳಲ್ಲಿ ಸಾಬೀತಾಗಿದೆ ಎಂದರು.
ಮಾಧ್ಯಮದವರು ಸ್ಫೋಟಕ ಸುದ್ದಿ ನೀಡುವ ಭರಾಟೆಯಲ್ಲಿ ಅಸೂಕ್ಷ್ಮವಾಗಿ ಮಕ್ಕಳ ಬಗ್ಗೆ ವರದಿ ಮಾಡಬಾರದು. ವರದಿಗಾರರು ಹಾಗೂ ಸಂಪಾದಕರು ಸೂಕ್ಷ್ಮತೆಯನ್ನು ಹಾಗೂ ಸಂವೇದನಾಶೀಲತೆಯನ್ನು ಹೊಂದಿರಬೇಕು ಎಂದರು.
18 ವರ್ಷದೊಳಗಿನ ಮಕ್ಕಳು ತಪ್ಪು ಮಾಡಿರುವ ಆರೋಪವಿರುವ ಪ್ರಕರಣಗಳಲ್ಲಿ ಮಾಧ್ಯಮದವರು 'ಬಾಲಪರಾಧಿ' ಎಂಬ ಪದ ಬಳಕೆಯ ಬದಲು 'ಕಾನೂನಿನೊಂದಿಗೆ ಸಂಘರ್ಷದಲ್ಲಿರುವ ಮಗು' ಎಂದು ಕರೆಯಬೇಕು. ಯಾವುದೇ ಮಕ್ಕಳು ಅಪರಾಧ ಮಾಡುವುದಿಲ್ಲ, ಬದಲಾಗಿ ಸಮಾಜದ ವ್ಯವಸ್ಥೆ ಅವರನ್ನು ತಪ್ಪು ಮಾಡಿಸುತ್ತದೆ ಎಂದರು.
18 ವರ್ಷದೊಳಗಿನ ಮಕ್ಕಳು ಕಾನೂನಿನೊಂದಿಗೆ ಸಂಘರ್ಷಕ್ಕೆ ಒಳಗಾದಾಗ ಮಗುವಿನ ಗುರುತನ್ನು ಪ್ರಕಟಿಸಬಾರದು ಹಾಗೂ 18 ವರ್ಷದೊಳಗಿನ ಮಕ್ಕಳ ಮೇಲಿನ ಲೈಂಗಿಕ ಹಲ್ಲೆ ಪ್ರಕರಣಗಳಲ್ಲಿ ಸುದ್ದಿ ಪ್ರಸಾರ ಹಾಗೂ ಪ್ರಕಟಣೆ ಸಂದರ್ಭದಲ್ಲಿ ಅತ್ಯಾಚಾರ ಎಂಬ ಪದ ಬಳಕೆಯ ಬದಲು ಲೈಂಗಿಕ ಹಲ್ಲೆ ಅಥವಾ ದೌರ್ಜನ್ಯ ಎಂಬ ಪದ ಬಳಸುವುದು ಸೂಕ್ತ ಎಂದರು. ವೇದಿಕೆಯಲ್ಲಿ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಉಪನಿರ್ದೇಶಕ ರಾಜಾನಾಯ್ಕ್, ಪ್ರೆಸ್ ಕ್ಲಬ್ ಅಧ್ಯಕ್ಷ ಬಿ.ಎಂ.ರವಿ, ಪ್ರೆಸ್ ಕ್ಲಬ್ ಕಾರ್ಯದರ್ಶಿ ಪ್ರಕಾಶ್, ಜಿಲ್ಲಾ ವಕೀಲರ ಸಂಘದ ಅಧ್ಯಕ್ಷ ಸುಧಾಕರ್, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಹಿರಿಯ ಸಹಾಯಕ ನಿರ್ದೇಶಕ ಬಿ.ಎ.ಖಾದರ್ ಶಾ ಹಾಗೂ ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿ ರಂಗನಾಥ ಉಪಸ್ಥಿತರಿದ್ದರು.

---

ಚಿಕ್ಕಮಗಳೂ

ಮಕ್ಕಳ ಹಕ್ಕು ರಕ್ಷಣೆ ಮಾಧ್ಯಮ ಕಾರ್ಯಾಗಾರ । ರಾಘವೇಂದ್ರ ಭಟ್ ಹೇಳಿಕೆ

## ಮಕ್ಕಳ ಬದುಕಿನ 'ಘನತೆ' ಕಾಪಾಡಿ

---

4 ಜನಮಿತ್ರ

## ಮಕ್ಕಳ ಕುರಿತಾದ ವರದಿ

ಪದ ಬಳಕೆ ವೇಳೆ ಜಾಗರೂಕತೆ ಇರಲಿ: ಅಪರ ಜಿಲ್ಲಾಧಿಕಾರಿ ರೂಪಾ

---

ತಾಮಹ

ಮಕ್ಕಳ ಸಂರಕ್ಷಣೆಯಲ್ಲಿ ಮಾಧ್ಯಮಗಳ ಪಾತ್ರದ ಕುರಿತ ಕೈಪಿಡಿ ಬಿಡುಗಡೆ

## ಮಕ್ಕಳ ರಕ್ಷಣೆಗೆ "ಘನತೆಯ ಬದುಕು"

---

## ಮಕ್ಕಳ ಬಗ್ಗೆ ಜಾಗ್ರತೆಯಿಂದ ಪದ ಬಳಸಿ: ರೂಪಾ

ಮಕ್ಕಳ ಸಂರಕ್ಷಣೆಯಲ್ಲಿ ಮಾಧ್ಯಮಗಳ ಪಾತ್ರ ಕುರಿತ ಘನತೆಯ ಬದುಕು ಕೈಪಿಡಿ ಬಿಡುಗಡೆ ಸಮಾರಂಭ

# ಮಾಧ್ಯಮಗಳಿಗೆ ಸಂವೇದನಾಶೀಲತೆ ಮುಖ್ಯ

ಕಾರ್ಯಾಗಾರದಲ್ಲಿ ಎಡಿಸಿ ರೂಪಾ ಅಭಿಮತ | ಮಕ್ಕಳ ಕುರಿತ ವರದಿಗಳಲ್ಲಿ ಜಾಗರೂಕತೆ ಅಗತ್ಯ



# 'ಮಕ್ಕಳ ಖಾಸಗಿತನದ ಹಕ್ಕು ಎತ್ತಿ ಹಿಡಿಯಿರಿ'

'ಘನತೆಯ ಬದುಕು' ಮಾಧ್ಯಮ ಮತ್ತು ಮಕ್ಕಳು ಕೈಪಿಡಿ ಬಿಡುಗಡೆ



# ಮಕ್ಕಳ ಬಗ್ಗೆ ವರದಿಗಳಲ್ಲಿ ಜಾಗರೂಕತೆಯಿಂದ ಪದ ಬಳಕೆ ಮಾಡಬೇಕು



# ಮಕ್ಕಳ ಬಗ್ಗೆ ವರದಿಗಳಲ್ಲಿ ಜಾಗರೂಕತೆಯಿಂದ ಪದ ಬಳಕೆ ಮಾಡಬೇಕು: ಅಪರ ಜಿಲ್ಲಾಧಿಕಾರಿ



ಮಕ್ಕಳ ಮನಸ್ಸು ಸೂಕ್ಷ್ಮ, ಸಂವೇದನಾಶೀಲ | ಅಪರ ಜಿಲ್ಲಾಧಿಕಾರಿ ರೂಪಾ ಹೇಳಿಕೆ

# ಪದಬಳಕೆ ಮಾಡುವಾಗ ಎಚ್ಚರವಿರಲಿ



## ಪೊಲೀಸ್ ಠಾಣೆಗಳಲ್ಲಿ ಪ್ರತಿ ಗುರುವಾರ ಅರಿವು

- ಕಾರ್ಯಕ್ರಮ ಪರಿಣಾಮಕಾರಿಯಾಗಿ ಜಾರಿಗೊಳಿಸಿ
- ಯುನಿಸೆಫ್ ಸಂಯೋಜಕ ರಾಘವೇಂದ್ರ ಭಟ್ ಸಲಹೆ



## Chamarajanagara District

Released By Deputy Commissioner District Administration, Chief Executive Officer Zilla Panchayat and Participated by all District Officers, CWC President / members, DCPO and Team and Media Reporters of the Chamarajanagara Distrcit at ZP Meeting Hall.









ಮಾಧ್ಯಮಗಳಿಗೆ ಬೇಕು ಮಕ್ಕಳ ಸುದ್ದಿ ನೀತಿ

ಮಕ್ಕಳ ಹಕ್ಕು ಸಂವೇದನೆ ಅಗತ್ಯ

ಮಕ್ಕಳ ಮೇಲೆ ದೌರ್ಜನ್ಯ: ಮಾಧ್ಯಮ ಸಂಯಮ ಅಗತ್ಯ

Media urged to exercise care while reporting assault cases

ವರದಿಗಾರರಿಗೆ ಸಂವೇದನಶೀಲತೆ ಅಗತ್ಯ

Media must be discreet while reporting child abuse

'ವರದಿ ಮಾಡುವವರಿಗೆ ಲಕ್ಷ್ಮಣರೇಖೆ ಅಗತ್ಯ'

ಮಕ್ಕಳ ವಿಚಾರದಲ್ಲಿ ಸೂಕ್ಷ್ಮತೆ ಇರಲಿ

ಮಕ್ಕಳ ಸಂರಕ್ಷಣೆಯಲ್ಲಿ ಮಾಧ್ಯಮಗಳ ಪಾತ್ರ ಪ್ರಮುಖ

ಮಾಧ್ಯಮಗಳು ಸಂವೇದನಾಶೀಲತೆ ಬೆಳೆಸಿಕೊಳ್ಳಬೇಕು

ಮಾಧ್ಯಮಗಳಿಂದ ಹೊಸ ಮಾದರಿ ಸಿದ್ಧಾಂತ ಅಗತ್ಯ

ಮಾಧ್ಯಮಗಳು ಸಂವೇದನಾಶೀಲತೆ ಬೆಳೆಸಿಕೊಳ್ಳಬೇಕು

ಮಕ್ಕಳ ಹಕ್ಕು ರಕ್ಷಣೆಯಲ್ಲಿ ಮಾಧ್ಯಮ ಪಾತ್ರ ಹಿರಿದು

ಮಕ್ಕಳಿಗೆ ಮಾರಕವಾಗುವ ವರದಿಗೆ ಆದ್ಯತೆ ಬೇಡ

ಶೋಷಣೆ ವರದಿಯಲ್ಲಿ ಸೂಕ್ಷ್ಮತೆ ಮರೆಯದಿರಿ

ಮಾಧ್ಯಮಗಳಿಗೆ ಬೇಕು ಸಂವೇದನಾಶೀಲತೆ

ಹಕ್ಕು ರಕ್ಷಣೆಯಲ್ಲಿ ಮಾಧ್ಯಮ ಪಾತ್ರ ಪ್ರಮುಖ

ಪೈಪೋಟಿಯಲ್ಲಿ ವರದಿಗಳು ಮಹತ್ವ ಕಳೆದುಕೊಳ್ಳದಿರಲಿ:

ಮಕ್ಕಳ ಹಕ್ಕುಗಳ ತಿಳಿವಳಿಕೆ ಮೂಡಿಸಿ

'ಬಿಸಿ ಸುದ್ದಿ ಕೊಡುವ ಭರದಲ್ಲಿ ಭವಿಷ್ಯಕ್ಕೆ ಕುತ್ತು'

ಜಾಗೃತಿ ಮೂಡಿಸುವಲ್ಲಿ ಮಾಧ್ಯಮದ ಪಾತ್ರ ಹಿರಿದು

ಮಕ್ಕಳ ಹಕ್ಕು ಕಾಪಾಡುವುದು ಎಲ್ಲರ ಜವಾಬ್ದಾರಿ

ಮಕ್ಕಳ ರಕ್ಷಣೆ ಎಲ್ಲ ನಾಗರಿಕರ ಪ್ರಮುಖ ಹೊಣೆ

ಮಾಧ್ಯಮಗಳಿಗೆ ಮಕ್ಕಳ ಭವಿಷ್ಯದ ಹೊಣೆಗಾರಿಕೆ ಇರಲಿ:

ಹಕ್ಕುಗಳಿಗೆ ಭಂಗ ತರದಿರಲಿ ವರದಿ

ಮಕ್ಕಳ ಹಕ್ಕುಗಳ ರಕ್ಷಣೆ: ಕಾಳಜಿ ಅಗತ್ಯ

‘ಮಕ್ಕಳ ರಕ್ಷಣೆ ಪ್ರತಿಯೊಬ್ಬರ ಹೊಣೆಯಾಗಿದೆ’

'Protect rights of children'

प्रसार माध्यमांनी वास्तव रूप मांडावे

Workshop for media fraternity on Child Rights and Child Protection

संरक्षण हक्क मुलांपर्यंत पोहोचवा

ಆರೋಗ್ಯಪೂರ್ಣ ಸಮಾಜ ನಿರ್ಮಾಣ ಗುರಿಯಾಗಲಿ

ಮಕ್ಕಳ ಸಂರಕ್ಷಣೆಯಾಗದೆ ಮಾನವ ಅಭಿವೃದ್ಧಿ ಅಸಾಧ್ಯ

ಅಭಿವೃದ್ಧಿಗೆ ಮಕ್ಕಳ ಹಕ್ಕಿನ ಸಂರಕ್ಷಣೆ ಅಗತ್ಯ

ಬದಲಾವಣೆಯಲ್ಲಿ ಮಾಧ್ಯಮಗಳ ಪಾತ್ರ ಹಿರಿದು

ಘಟನೆ ಸತ್ಯಾಸತ್ಯತೆ ಪರಿಶೀಲಿಸಿ ವರದಿ ಮಾಡಿ

ಪತ್ರಕರ್ತರಿಗೆ ಸಂವೇದನಾಶೀಲತೆ-ಸೂಕ್ಷ್ಮತೆ ಅಗತ್ಯ

ಸುದ್ದಿ ಕೊಡುವ ಭರಾಟೆಯಲ್ಲಿ ಮಕ್ಕಳ ಹಕ್ಕುಗಳಿಗೆ ಧಕ್ಕೆ ಬಾರ

ಮಾಧ್ಯಮದಿಂದ ಸಮಾಜದ ಧನಾತ್ಮಕ ಬದಲಾವಣೆ:

ಮಕ್ಕಳ ಅಭಿವೃದ್ಧಿಯೇ ದೇಶದ ಅಭಿವೃದ್ಧಿ

ಗರ್ಭಾವಸ್ಥೆಯಲ್ಲೇ ಹಕ್ಕು ಪಡೆಯುವ ಮಗು

ಹಕ್ಕುಗಳ ಅನುಷ್ಠಾನ ಅಗತ್ಯ

ಧನಾತ್ಮಕ ಬದಲಾವಣೆಗೆ ಮಾಧ್ಯಮ ಬೇಕು

ಸಮಾಜ ಬದಲಾವಣೆಯಲ್ಲಿ ಮಾಧ್ಯಮಗಳ ಪಾತ್ರ ಅಪಾರ

ಮಕ್ಕಳ ಮೇಲೆ ಒತ್ತಡ ಹೇರುವುದು ಬೇಡ

ಮಕ್ಕಳ ಹಕ್ಕುಗಳ ಸಂರಕ್ಷಣೆಗೆ ಬದ್ಧರಾಗಿ

ಮಕ್ಕಳ ಮನಸ್ಸು ಅರಿತು ವ್ಯವಹರಿಸಿ

ಮಕ್ಕಳ ಹಕ್ಕುಗಳ ಕಾಪಾಡುವುದು ಎಲ್ಲರ ಕರ್ತವ್ಯ

ಮಕ್ಕಳೊಂದಿಗೆ ಸೌಮ್ಯದಿಂದ ವರ್ತಿಸಿ

‘ಮಕ್ಕಳಿಗೆ ಹಕ್ಕು ಅನುಭವಿಸಲು ಬಿಡಿ’

ಮಾಧ್ಯಮಕ್ಕೆ ಕೆಲ ನೀತಿ ಸಂಹಿತೆ ಅಗತ್ಯವಿದೆ

ಸಮಾಜ ಬದಲಾವಣೆಗೆ ಮಾಧ್ಯಮದ ಪಾತ್ರ ಬಹು ಮುಖ್ಯ


ಸುದ್ದಿಯ ತರಾತುರಿಯಲ್ಲಿ,
ತಕ್ಷಣ ಪ್ರಸಾರ ಮಾಡಬೇಕೆಂಬ ಸ್ಪರ್ಧೆಯಲ್ಲಿ,
ಸಾಮಾಜಿಕ ಹೊಣೆಗಾರಿಕೆಯ ಸ್ಫೂರ್ತಿಯಲ್ಲಿ,
ನಮ್ಮಲ್ಲಿಯೇ ಪ್ರಥಮ ಎಂಬ ಭ್ರಮೆಯಲ್ಲಿ,
ನ್ಯಾಯ ದೊರಕಿಸುವ ಹೋರಾಟದಲ್ಲಿ,
'ಬ್ರೇಕಿಂಗ್ ನ್ಯೂಸ್' ನ ಭರಾಟೆಯಲ್ಲಿ,
ಕರ್ತವ್ಯದ ಆತುರದಲ್ಲಿ,
ಟಿ.ಆರ್.ಪಿ ಯ ಸುಳಿಯಲ್ಲಿ,
ಅತಿಯಾದ ಉತ್ಸಾಹದಲ್ಲಿ,
ಮಕ್ಕಳು ಮತ್ತು ಅವರ ಕುಟುಂಬದ ಗೌರವ,
ಹಕ್ಕು, ಸ್ವಾತಂತ್ರ್ಯ, ಗೌಪ್ಯತೆ, ಮರ್ಯಾದೆ, ನಂಬಿಕೆ,
ಸ್ವಾಭಿಮಾನಕ್ಕೆ ಚ್ಯುತಿ ಹಾಗೂ ಅವರ 'ಘನತೆ' ಗೆ
ಧಕ್ಕೆ ಬಾರದಂತೆ ನಾವೆಲ್ಲರೂ ನೋಡಿಕೊಳ್ಳೋಣ.



In the rush of News.
In a competition to be broadcast immediately.
In the spirit of social responsibility.
In the delusion that we are first.
In the struggle for justice,
In the rush of 'Breaking News'.
In the rush of Duty,
In the Vortex of TRP,
In the high Sprits,
Let us all ensure that the respect, rights,
freedom, privacy, diginity, trust, self esteem
of childrens and their families are not violated
and their dignity is not compromised.




ಘನತೆಯ ಬದುಕು




GANATHEYA BADUKU

(Dignity of Life)